




# ಮನಸಿನಲೊಂದು ಮಧ್ಯಾಹ್ನ

ನನಗೆ ಅಷ್ಟಾಗಿ ನೆನಪಿಲ್ಲ
ಅಮ್ಮನ ಊರಿಗೆ ಹೋಗುವ ಬಸ್ಸಿಗಾಗಿ ನಾವು ಕಾದುಕೂತಿದ್ದು
ಅಥವಾ ನಗರಗಳಿಗೆ ತೆರಳಲು ರೈಲುಗಳಿಗಾಗಿ ಕಾಯುತ್ತ
ಬೇಸಿಗೆಯನ್ನು ಸಹನೀಯಗೊಳಿಸುತ್ತಿದ್ದುದು.

ಪಟಾಕಿಯ ಉರಿವ ಬತ್ತಿಯಂತಿದ್ದ ಅವು
ನನ್ನ ತಾಳ್ಮೆಯನ್ನೆಲ್ಲ ಖಾಲಿಯಾಗಿಸುತ್ತಿದ್ದವು.

ನನ್ನ ನೆನಪುಗಳ ಕಾಲುವೆಯ ಪ್ರವಾಹಕ್ಕೆ
ತಡೆಹಾಕಿರುವ ಹೂಗುಚ್ಛದಂತೆ

ನನ್ನ ಬಳಿ ಇದೆ ಮೀನು ಹಿಡಿಯುತ್ತಿರುವ ಈ ಫೋಟೋ
ಅಣ್ಣ, ಅಮ್ಮ ಮತ್ತು ದಾದುವಿನೊಂದಿಗೆ
(ಎಲ್ಲರಿಗಿಂತ ದಷ್ಟಪುಷ್ಟನಾಗಿದ್ದ ಅವನ ಕೈಯಲ್ಲಿ ಗಾಳ)

ಉತ್ಕಟ ಉಲ್ಲಾಸವಿದೆ ಇದೆ ಇನ್ನೂ ಆ ಚಿತ್ರದಲ್ಲಿ
ಆದರೆ ಚಿಕ್ಕಪ್ಪ ಮತ್ತು ಅಜ್ಜ ಮಾತ್ರ ಈಗಿಲ್ಲ.

ಆ ದಿನ ನಾವು ಹಿಡಿದ ಮೀನು
ನನ್ನ ಮನಸಿನಲ್ಲಿನ್ನೂ ಚಡಪಡಿಸುತ್ತಿದೆ.
ಸುರಕ್ಷಿತವಾಗಿಟ್ಟಿರಬಹುದು ಕೊಳ
ಮಧ್ಯಾಹ್ನದ ಬೆಳಕಿನಲ್ಲಿ ಸೆರೆಹಿಡಿದ
ನಮ್ಮ ಪ್ರತಿಬಿಂಬಗಳನ್ನು
ಆದರ ಕಡುಗಪ್ಪು ನೀರಿನಲ್ಲೆಲ್ಲೋ.

